**ಎರಡನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಃ ನ್ಯಾಯಾಲಯ, ಮದ್ದೂರು**

ಓಎಸ್ 216/2018 ಪಿಡಬ್ಲ್ಯೂ-1

ದಿನಾಂಕಃ-17 -10-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯರ ಪರ ಮಾನ್ಯ ಶ್ರೀ.ಹೆಚ್ ಎಂ ವಕೀಲರಿಂದಃ-**

ನನ್ನ ತಂದೆ ಸರ್ಕಾರಿ ಪಾಲಿ ಟೆಕ್ನಿಕ್ ಕಾಲೇಜಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು ಸುಮಾರು 35 ವರ್ಷಗಳ ಕಾಲ ಸರ್ಕಾರಿ ಸೇವೆಯಲ್ಲಿದ್ದರು ಎಂದರೆ ಸರಿ. ಅವರ ನಿವೃತ್ತಿ ಕಾಲದಲ್ಲಿ 60 ಸಾವಿರ ಸಂಬಳ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. ಅವರ ನಿವೃತ್ತಿಯ ನಂತರ ನಿವೃತಿಯ ವೇನ ಎಷ್ಟು ಬರುತ್ತಿತ್ತು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ಚನ್ನಪಟ್ಟಣದದಿಂದ ಓಡಾಡುತ್ತಿದ್ದರು ಎಂದರೆ ಸರಿ. ನಾನು 7 ನೇ ತರಗತಿಯವರೆಗೆ ಮಾತ್ರ ವಿದ್ಯಾಬ್ಯಾಸ ಮಾಡಿದ್ದೇನೆ. ಶ್ರೀನಿವಾಸ ಪಿಹೆಚ್ ಡಿ, ಸೌಮ್ಯಶ್ರೀ ಪಿಯುಸಿ, ವಿದ್ಯಾಶ್ರೀ ಎಸ್ ಎಸ್ ಎಲ್ ಸಿ ವಿದ್ಯಾಬ್ಯಾಸ ಮಾಡಿರುತ್ತಾರೆ. ನನ್ನ ತಂದೆ ಅವರ ಜೀವಿತಾವದಿಯಲ್ಲಿ ಸಂಬಳವನ್ನು ಯಾವುದಕ್ಕೆ ಯಾವುದಕ್ಕೆ ಖರ್ಚು ಮಾಡುತ್ತಿದ್ದರು ಎಂದು ನನಗೆ ಗೊತ್ತಿಲ್ಲ. ನನ್ನ ತಂದೆ ದಾವಾ ಐಟಂ ನಂ. 2 ರ ಆಸ್ತಿಯನ್ನು ನನ್ನ ತಾತನ ಆಸ್ತಿಯಿಂದ ಸಂಪಾದಿಸಿ ಖರೀದಿಸಿರುತ್ತಾರೆ. ನನ್ನ ತಾತನ ಆಸ್ತಿ ವಳಗೆರೆಹಳ್ಳಿಯಲ್ಲಿ ಜಮೀನು ಇತ್ತು. ನನ್ನ ತಾತನಿಗೆ ಪಿತ್ರಾರ್ಜಿತವಾಗಿ 2 ಎಕರೆ ಜಮೀನು ಇತ್ತು. ಆ ಆಸ್ತಿಯನ್ನು ಈ ದಾವೆಯಲ್ಲಿ ಸೇರಿಸಿರುತ್ತೇನೆ. ದಾವಾ ಆಸ್ತಿಯ ಚಕ್ಕುಬಂಧಿ ನನಗೆ ಗೊತ್ತಿಲ್ಲ. ಸದರಿ ಜಮೀನು ಒಂದು ಬೆಳೆ ಬರುತ್ತದೆ ಎಂದರೆ ಸರಿಯಲ್ಲ, ಎರಡು ಬೆಳೆ ಬೆಳೆಯಬಹುದು. ಕಬ್ಬು, ಭತ್ತ ಬೆಳೆಯುತ್ತಾರೆ. ಆ ಜಮೀನಿನಲ್ಲಿ ನನ್ನ ತಂದೆ ಕಬ್ಬು ಬೆಳೆದು ಪ್ಯಾಕ್ಟರಿಗೆ ಕೊಟ್ಟ ಬಗ್ಗೆ ನನಗೆ ಗೊತ್ತಿಲ್ಲ. ಆ ಜಮೀನಿನ ಆದಾಯದಿಂದ ನಮ್ಮ ಕುಟುಂಬದ 6 ಜನರ ಜೀವನ ಸಾಗಬೇಕಿತ್ತು. ಆ ಜಮೀನಿನಲ್ಲಿ ಎಷ್ಟು ಆದಾಯ ಬರುತ್ತಿತ್ತು ಎಂದು ಈ ದಾವಾದಲ್ಲಿ ತಿಳಿಸಿಲ್ಲ. ನನ್ನ ಮದುವೆ 19 ವರ್ಷಕ್ಕೆ 1995 ರ ಸಾಲಿನಲ್ಲಿ ಮದುವೆ ಮಾಡಿಕೊಟ್ಟಿರುತ್ತಾರೆ. ಮದುವೆಯ ನಂತರ ನನ್ನ ಗಂಡನ ಮನೆಯು ಇರುವ ಕುದುರಗುಂಡಿಯಲ್ಲಿ ವಾಸವಾಗಿರುತ್ತೇನೆ. 3 ಮತ್ತು 4 ನೇ ಪ್ರತಿವಾದಿಗಳು ನನ್ನ ಅಕ್ಕಂದಿರಾಗಬೇಕು. 3 ನೇ ಪ್ರತಿವಾದಿಯನ್ನು ಯಾವ ವರ್ಷದಲ್ಲಿ ಮದುವೆ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ, ನನ್ನ ಮದುವೆಯ 8 ವರ್ಷಕ್ಕಿಂತ ಮೊದಲು ಮಾಡಿರುತ್ತಾರೆ. ಅದೇರೀತಿ 4 ನೇ ಪ್ರತಿವಾದಿಯನ್ನು ನನ್ನ ಮದುವೆಯ 6 ವರ್ಷಕ್ಕಿಂತ ಮೊದಲು ಮಾಡಿರುತ್ತಾರೆ.

3 ಮತ್ತು 4 ನೇ ಪ್ರತಿವಾದಿಗಳ ವಿವಾಹಕ್ಕೆ ನನ್ನ ತಂದೆ ಎಷ್ಟು ಖರ್ಚು ಮಾಡಿರುತ್ತಾರೆಂದು ಮತ್ತು ನನ್ನ ಮದುವೆಗೆ ನನ್ನ ತಂದೆ ಎಷ್ಟು ಖರ್ಚು ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ನನ್ನ ತಂದೆಯ ಖರ್ಚು ಮತ್ತು ಆದಾಯದ ಬಗ್ಗೆ ನನಗೆ ಗೊತ್ತಿಲ್ಲ. ದಾವಾ ಐಟಂ ನಂ.2 ರ ಆಸ್ತಿಯನ್ನು ಯಾವಾಗ ಖರೀದಿಸಿರುತ್ತಾರೆಂದು ಮತ್ತು ಅದನ್ನು ಖರೀದಿ ಮಾಡಿದ ಬಗ್ಗೆಯೂ ನನಗೆ ಗೊತ್ತಿಲ್ಲ. ಆ ಆಸ್ತಿಯ ಕ್ರಯಪತ್ರವನ್ನು ಸಹ ನಾನು ಓದಿಲ್ಲ. ಆ ಅಸ್ತಿಯ ಕ್ರಯದ ವ್ಯವಹಾರದ ಬಗ್ಗೆಯೂ ನನಗೆ ಗೊತ್ತಿಲ್ಲ. ಆ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಾವಾ ಐಟಂ ನಂ.2 ರ ಕ್ರಯಪತ್ರವನ್ನು ನಾನು ಉದ್ದೇಶಪೂರ್ವಕವಾಗಿ ಹಾಜರುಪಡಿಸಿಲ್ಲ ಎಂದರೆ ನಾನು ಮಾಡಿಲ್ಲ ಎಂದು ನುಡಿಯುತ್ತಾರೆ. ನನ್ನ ತಂದೆ ತನ್ನ ಮಕ್ಕಳು ಏಳಿಗೆಗಾಗಿ ಎಲ್ಲಾ ಮಾಡಿರುತ್ತಾರೆಂದರೆ ಸರಿ. ನನ್ನ ತಂದೆ ಹಣದ ಅವಶ್ಯಕತೆ ಇದ್ದಾಗ ಸಾಲ ಮಾಡುತ್ತಿದ್ದರು, ಸಾಲವನ್ನು ತೀರಿಸುತ್ತಿದ್ದರು ಎಂದರೆ ಆ ಬಗ್ಗೆ ನನಗೆ ತಿಳಿಸುತ್ತಿರಲಿಲ್ಲ. ನನ್ನ ತಂದೆಯ ಲಿಖಿತ

ಹೇಳಿಕೆಯ ಬಗ್ಗೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯು ಸಲ್ಲಿಸಿರುವ ಹೇಳಿಕೆಯ ಬಗ್ಗೆ ನನಗೆ ಗೊತ್ತಿಲ್ಲ.3 ನೇ ಪ್ರತಿವಾದಿಯ ಗಂಡ ಸರ್ಕಾರಿ ನೌಕರಿಯಲ್ಲಿದ್ದರು ಮತ್ತು ಅವರಿಗೆ ಸಾಕಷ್ಟು ಸಂಬಳ ಬರುತ್ತಿತ್ತು ಎಂದರೆ ನನಗೆ ಗೊತ್ತಿಲ್ಲ. 1998 ರಲ್ಲಿ ಕುದುರಗುಂಡಿಯ ನನ್ನ ಗಂಡನ ಮನೆಯಲ್ಲಿ ವಾಸವಾಗಿದ್ದೆ. ಆ ಸಮಯದಲ್ಲಿ ನನ್ನ ತಂದೆಗೆ ಏನೇನು ವ್ಯವಹಾರ ಇತ್ತು ಎಂದು ನನಗೆ ಗೊತ್ತಿಲ್ಲ.1998 ನೇ ಸಾಲಿನಲ್ಲಿ ನನ್ನ ತಂದೆ ನಿವೃತ್ತಿಯಾಗಿದ್ದರು. ನನ್ನ ತಂದೆ ನನ್ನ ಮದುವೆಗೆ 8-10 ಲಕ್ಷ ಖರ್ಚು ಮಾಡಿರಬಹುದಾ ಎಂದರೆ ನನಗೆ ಗೊತ್ತಿಲ್ಲ. ನನ್ನ ಮದುವೆಯ ಸಮಯದಲ್ಲಿ ಸಾಕಷ್ಟು ಹಣಕಾಸಿನ ಮುಗ್ಗಟ್ಟಿಗೆ ಒಳಗಾಗಿದ್ದರು ಎಂದರೆ ನನಗೆ ಗೊತ್ತಿಲ್ಲ. ಅವರ ಆರ್ಥಿಕ ಪರಿಸ್ಥಿತಿಯ ಬಗ್ಗೆ ನಾನು ಕೇಳಿಲ್ಲ.

ನನ್ನ ಮದುವೆಯು ಆದ ನಂತರ ಅಂದರೆ 1998 ರಲ್ಲಿ ದಾವಾ ಐಟಂ ನಂ.1ರ ಆಸ್ತಿಯನ್ನು ಮಾರಾಟ ಮಾಡಲು ಇಚ್ಚಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನನ್ನ ಅಕ್ಕನೇ ಆ ಸಮಯದಲ್ಲಿ ಹಣ ನೀಡಿ ಖರೀದಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲ. 3 ನೇ ಪ್ರತಿವಾದಿಯಾದ ನನ್ನ ಅಕ್ಕ 1ಲಕ್ಷದ 20 ಸಾವಿರ ಹಣವನ್ನು ನನ್ನ ತಂದೆಗೆ ಕೊಟ್ಟು ಖರೀದಿಸಿರುತ್ತಾರೆಂದರೆ ನನಗೆ ಗೊತ್ತಿಲ್ಲವೆಂದು ಮೊದಲು ತಿಳಿಸಿ, ನಂತರ ಗೊತ್ತಿಲ್ಲ ಎಂದು ತಿಳಿಸಿರುತ್ತಾರೆ. ಸದರಿ ಹಣದಿಂದ ನನ್ನ ತಂದೆ ಸಾಲವನ್ನು ತೀರಿಸಿಕೊಟ್ಟಿರುತ್ತಾರೆಂದರೆ ಸರಿಯಲ್ಲ. ಕ್ರಯಪತ್ರವನ್ನು ನನ್ನ ತಂದೆ ಬರೆದುಕೊಡುವ ಬದಲು ಖಾತೆಯನ್ನು ಎಂಆರ್ ನಂ.49/1998-99 ರಂತೆ ಖಾತೆ ಬದಲಾವಣೆ ಮಾಡಿಕೊಟ್ಟಿರುತ್ತಾರೆಂದರೆ ಸರಿಯಲ್ಲ. ನಾನು ಮದುವೆಯಾದ ನಂತರ ಆಗಾಗ್ಗೆ ಗದ್ದೆಯ ಬಳಿ ಹೋಗುತ್ತಿದ್ದೆ. 1998 ರಿಂದ ಮೋಸದಿಂದ ನನ್ನ ಅಕ್ಕ ವ್ಯವಸಾಯ ಮಾಡುತ್ತಿರುತ್ತಾರೆ. ಈ ಬಗ್ಗೆ ನನ್ನ ತಂದೆಯನ್ನು ವಿಚಾರಿಸಿರುತ್ತೇನೆ, ಆದರೆ ಅವರು ಸರಿಯಾದ ಉತ್ತರ ಕೊಟ್ಟಿರುವುದಿಲ್ಲ. 3 ನೇ ಪ್ರತಿವಾದಿಯು ಸದರಿ ಆಸ್ತಿಯಲ್ಲಿ ಭತ್ತ ಬೆಳೆಯುತ್ತಾರೆಂದೆ ನನಗೆ ಗೊತ್ತಿಲ್ಲ. ನನ್ನ ತಂದೆಯವರು ನೊಂದಾಯಿತ ಪತ್ರ ಮಾಡಿಕೊಟ್ಟಿರುವುದಿಲ್ಲವೆಂದು 2018 ರಲ್ಲಿ ಸದರಿ ಆಸ್ತಿಗೆ ಸಂಬಂಧಿಸಿದಂತೆ ಹಕ್ಕು ಖುಲಾಸೆ ಬರೆದುಕೊಟ್ಟಿರುತ್ತಾರೆಂದರೆ ನನಗೆ ಗೊತ್ತಿಲ್ಲ, ಅದು ಸುಳ್ಳು ಎಂದು ನುಡಿಯುತ್ತಾರೆ. ನನ್ನ ತಂದೆ ವಿದ್ಯಾವಂತರು, ಸಾಕಷ್ಟು ಬುದ್ದಿವಂತರು ಎಂದರೆ ಸರಿ.

ನನ್ನ ಗಂಡ ಪ್ರೌಢ ಶಾಲಾ ಶಿಕ್ಷಕರಾಗಿದ್ದರು. ದಾವಾ ಐಟಂ ನಂ.1 ರ ಆಸ್ತಿಯಲ್ಲಿಯೇ ಭಾಗಾಂಶ ನನಗೆ ಕೊಡುವುದಾಗಿ ನನ್ನ ತಂದ ಹೇಳಿದ್ದರು. ಸೌಮ್ಯ ಹಣ ಕೊಟ್ಟ ಹಾಗೆ ನಾನು ಹಣ ಕೊಡುತ್ತೇನೆ ಎಂದು ತಿಳಿಸಿರಲಿಲ್ಲ. ಸೌಮ್ಯ ಹಣ ಕೊಟ್ಟು ಖರೀದಿಸಿರುವುದರಿಂದ ನನ್ನ ತಂದೆ ತನ್ನ ಹಕ್ಕನ್ನು ಕಳೆದುಕೊಂಡಿದ್ದರು ಎಂದರೆ ಸರಿಯಲ್ಲ, ಆಕೆ ಅವರಿಗೆ ಯಾವುದೇ ಹಣ ಕೊಟ್ಟಿರಲಿಲ್ಲ ಎಂದು ನುಡಿಯುತ್ತಾರೆ. ಸೌಮ್ಯ ರವರ ಹೆಸರಿಗೆ ಆಗಿದ್ದ ಖಾತೆಯನ್ನು ನಾನು ಪ್ರಶ್ನಿಸಿಲ್ಲ, ಸದರಿ ಖಾತೆ ನನಗೆ ತಿಳಿಯದಂತೆ ಆಗಿರುತ್ತದೆ ಎಂದು ನುಡಿಯುತ್ತಾರೆ. 3 ನೇ ಪ್ರತಿವಾದಿಗೆ ದಾವಾ ಐಟಂ ನಂ.1 ರ ಆಸ್ತಿಯನ್ನು ಬರೆದುಕೊಟ್ಟಿರುವುದರಿಂದ ನನಗೆ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀಸವಾಲಿಗೆ ಕಾಲಾವಕಾಶ ಕೋರಿದ್ದು, ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಮೂರನೇ ಅಪರ ಸಿವಿಲ್ ಮತ್ತು ಜೆಎಂಎಫ್,ಸಿ,

ಸಾಕ್ಷಿಯ ಸಹಿಃ ನ್ಯಾಯಾಧೀಶರು, ಮದ್ದೂರು.